ಓ ಎಸ್ ಃ 7/2011 ಪಿ ಡಬ್ಲ್ಯೂ ಃ 1 - ಮಂಜುಳಾ

ದಿನಾಂಕಃ 05.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಆರ್ ಎ 5035/2019 ರ ಆದೇಶದ ಮೇರೆಗೆ ರೆಸ್ಟೋರ್ ಆಗಿದ್ದು, ಆ ಪ್ರಕಾರ ಪಾಟೀ ಸವಾಲು 9 ನೇ ಪ್ರತಿವಾದಿ ಪರ ಃ ಶ್ರೀ ಸಿ ಎಸ್ ಎಸ್ ವಕೀಲರಿಂದಃ

1. ನಾನು ಶಾಲೆ ಕಲಿತಿರುವುದಿಲ್ಲ. ನಾನು ಕೊತ್ತಗೆರೆ ಕುಣಿಗಲ್ ತಾಲೂಕಿನಲ್ಲಿ ವಾಸವಾಗಿರುತ್ತೇನೆ. ನಾನು ಸದರಿ ವಿಳಾಸದಲ್ಲಿ ವಾಸವಾಗಿದ್ದೇನೆ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ತಂದೆ ಪಾಲಹಳ್ಳಿಯ ವಾಸಿಯಾಗಿರುತ್ತಾರೆ. ನನ್ನ ತಾಯಿ ಕ್ಯಾತಮಾರನ ಹಳ್ಳಿಯವರಾಗಿದ್ದು ಅವರನ್ನು ಪಾಲಹಳ್ಳಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ತಂದೆ ಮರಣ ಹೊಂದಿದಾಗ ನನಗೆ ಸುಮಾರು 10 ವರ್ಷ ಇರಬಹುದು. ನನ್ನ ತಂದೆ ಯಾವ ವರ್ಷ ಮರಣ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ಪಾಲಹಳ್ಳಿಯಲ್ಲಿ ನನ್ನ ತಂದೆ ಮತ್ತು ನಮ್ಮ ಕುಟುಬಂಕ್ಕೆ ಸೇರಿದ ವಾಸದ ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸಾಕ್ಷಿ ಆ ಮನೆ ನಮಗೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಈ ಕೇಸನ್ನು ನಾನು ನನ್ನ ಸಹೋದರ ಮತ್ತು ಸಹೋದರಿಯರ ಮೇಲೆ ಹಾಕಿರುತ್ತೇನೆ. ಈ ದಾವೆಯನ್ನು ನನ್ನ ಪತಿ ಮರಣ ಹೊಂದಿದ ನಂತರ ನನ್ನ ತಾಯಿ ಕರೆದುಕೊಂಡು ಬಂದು ಹಾಕಿದ್ದು ಅದರ ಮಾಹಿತಿಯನ್ನು ಅವರು ನೀಡಿರುತ್ತಾರೆ. ಈ ದಿನ ನಾನು ನಮ್ಮ ವಕೀಲರ ಕಚೇರಿಗೆ ನನ್ನ ಅಣ್ಣ ರಾಮು ಅಂದರೆ 3 ನೇ ಪ್ರತಿವಾದಿಯೊಂದಿಗೆ ಹೋಗಿರುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ ನಾನು 8 ನೇ ಪ್ರತಿವಾದಿ ಹಾಗೂ ಆತನ ಜಿ ಪಿ ಎ ಹೋಲ್ಡರನ್ನು ಪಾರ್ಟಿ ಮಾಡಿದ್ದೇನೆ ಎಂದರೆ ಸರಿ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಅವರನ್ನು ನಾನು ಈ ಕೇಸಿನಲ್ಲಿ ಯಾವ ಕಾರಣಕ್ಕೆ ಪಾರ್ಟಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ, ನಾನು ಕುಣಿಗಲ್ ನಲ್ಲಿ ವಾಸವಾಗಿದ್ದೇನೆ. ನಮ್ಮ ಒಟ್ಟು ಕುಟುಂಬದ ಆಸ್ತಿ ಏನೆಲ್ಲ ಇದೆ ಎಂದು ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ಮತ್ತು ಆತನ ಜಿ ಪಿ ಎ ಹೋಲ್ಡರನ್ನು ಮೊದಲು ಪಾರ್ಟಿ ಮಾಡಿದ್ದು, ನಂತರ ಅವರನ್ನು ಕೈಬಿಟ್ಟಿರುತ್ತೇವೆ ಎಂದರೆ ಸರಿ. ಸದರಿಯವರು ನಾವು ರಾಜೀ ಮಾಡಿಕೊಳ್ಳೋಣ ಎಂದು ಹೇಳಿದ್ದಕ್ಕೆ ಅವರನ್ನು ಕೈಬಿಟ್ಟಿರುತ್ತೇನೆ. 8 ನೇ ಪ್ರತಿವಾದಿಗೆ ನನ್ನ ತಾಯಿ

ಯಾವ ಜಮೀನನ್ನು ಯಾವ ವರ್ಷದಲ್ಲಿ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿಃ 25.06.2001 ರಂದು ಆಸ್ತಿಯನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

2. ನಾನು ವಿವಾಹದ ನಂತರ ಹಬ್ಬ ಹುಣ್ಣಿಮೆಗೆ ಮಾತ್ರ ನನ್ನ ತಾಯಿ ಮನೆಗೆ ಬಂದು ಹೋಗುತ್ತಿದ್ದೆ ಎಂದರೆ ಸರಿ. ನನ್ನ ತಂದೆಗೆ ಸೇರಿದ ಜಮೀನುಗಳನ್ನು ನಾನು ಚಿಕ್ಕ ಹುಡುಗಿ ಇದ್ದಾಗ ನೋಡಿದ್ದು, ವಿವಾಹದ ನಂತರ ಅವುಗಳನ್ನು ನೋಡಿರುವುದಿಲ್ಲ. 8 ನೇ ಪ್ರತಿವಾದಿಯು ನಮ್ಮ ಕುಟುಂಬದ ಆಸ್ತಿಯನ್ನು ಖರೀದಿಸಿದ ನಂತರ 2003 ನಲ್ಲಿ ಒಂದು ಶಾಲೆ ಕಟ್ಟಿರುತ್ತಾರೆ. 2003 ರಲ್ಲಿ 8 ನೇ ಪ್ರತಿವಾದಿಯು ಆ ರೀತಿ ಶಾಲೆ ಕಟ್ಟಿದ್ದನ್ನು ಪ್ರಶ್ನಿಸಿ ನಾನು ಯಾವುದೇ ಕೇಸನ್ನು ಹಾಕಿರುವುದಿಲ್ಲ. ನಮ್ಮ ತಾಯಿ ಜಮೀನನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ 2003 ರಲ್ಲಿ ತಿಳಿದಿತ್ತು ಎಂದರೆ ಸರಿ. ಈ ದಾವೆಯನ್ನು ನನ್ನೊಂದಿಗೆ ನನ್ನ ಸಹೋದರಿಯರಾದ 10 ಮತ್ತು 11 ನೇ ಪ್ರತಿವಾದಿಗಳಾದ ಕೌಸಲ್ಯ ಮತ್ತು ಹೇಮಾವತಿ ಸೇರಿ ಸಲ್ಲಿಸಿದ್ದೇವೆ ಎಂದರೆ ಸರಿ.

3. ನಾನು ನನ್ನ ತಾಯಿ ಮತ್ತು ಸಹೋದರರನ್ನು ಯಾವ ವರ್ಷದಲ್ಲಿ ಹೋಗಿ ಭಾಗಾಂಶ ಕೇಳಿರುತ್ತೇನೆ ಎಂದು ಗೊತ್ತಿಲ್ಲ. ನಾನು ಮತ್ತು 10 ಮತ್ತು 11 ನೇ ಪ್ರತಿವಾದಿ ಸೇರಿಕೊಂಡು ವಕೀಲರ ಮೂಲಕ ನನ್ನ ತಾಯಿ ಮತ್ತು ಸಹೋದರರಿಗೆ ನಿಪಿ 18 ರಂತೆ ಲೀಗಲ್ ನೋಟೀಸ್ ಕಳುಹಿಸಿದ್ದೇವೆ ಎಂದರೆ ಸರಿ. ಸದರಿ ನೋಟೀಸ್ ತಾಯಿ ಮತ್ತು ಸಹೋದರರಿಗೆ ತಲುಪಿದ ಬಗ್ಗೆ ಸ್ವೀಕೃತಿ ಪತ್ರವನ್ನು ನ್ಯಾಯಾಲಯದಲ್ಲಿ ಹಾಕಿದ್ದೇನಾ ಎಂದು ಗೊತ್ತಿಲ್ಲ. ಸದರಿ ನೋಟೀಸನ್ನು ನನ್ನ ತಾಯಿ ಮತ್ತು ಸಹೋದರ ಮತ್ತು ಸಹೋದರಿಯವರು ಮಾತನಾಡಿಕೊಂಡು 8 ನೇ ಪ್ರತಿವಾದಿಗೆ ಕಳುಹಿಸಿದ್ದಾರೆ ಎಂದರೆ ಸಾಕ್ಷಿ ಆ ನೋಟೀಸ್ ನಾನು ಕಳುಹಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 17 ರಪ್ರಕಾರ ಷರೀಕ್ಕಾಗಿ ದಿಃ 01.01.2011 ರಂದು ನಾನು, ನನ್ನ ತಾಯಿ, 1 ರಿಂದ 7 ನೇ ಪ್ರತಿವಾದಿ ಮತ್ತು 9 ಮತ್ತು 10 ನೇ ಪ್ರತಿವಾದಿಯವರಿಗೆ ನೋಟೀಸನ್ನು ಕಳುಹಿಸಿದ್ದೆವೆ ಎಂದರೆ ಗೊತ್ತಿಲ್ಲ. ಸದರಿ ನೋಟೀಸನ್ನು ನಾನು ಕಳುಹಿಸಿದ ಬಗ್ಗೆ ಗೊತ್ತಿಲ್ಲ.

4. ನಮ್ಮ ಕುಟುಂಬದ ಆಸ್ತಿಯನ್ನು ಬೇರೆ ಯಾರ್ಯಾಗಿ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಆಸ್ತಿಗಳ ಪೈಕಿ 11 ಗುಂಟೆಯನ್ನು ನಮ್ಮ ಊರಿನ ನಾಗೇಂದ್ರ ಅವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಇದೆಲ್ಲಾ ಕುಮಾರನ ಕೆಲಸ ಎಂದು ನುಡಿಯುತ್ತಾರೆ. ಸದರಿ 11 ಗುಂಟೆಯ ಆಸ್ತಿಯನ್ನು ಈ ಕೇಸಿನ ಸೇರ್ಪಡೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಪಾಟೀ ಸವಾಲಿಗಾಗಿ ಮುಂದೂಡಲಾಗಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ